# ಮಾತು-ಕತೆ

ವರ್ಷಗಳ ಹಿಂದೆ ದೆಹಲಿಗೆ ಬಂದರು. ದೆಹಲಿಯಿಂದ ಮುರ್ಶಿದಾಬಾದಿಗೆ, ಬಳಿಕ ಲಖನೌಗೆ ಶಿಮ್ಲಾಕ್ಕೆ ವಲಸೆ ಹೋದರು. ಕಾನ್ಪುರ–ಲಖನೌ ನಡುವೆ ಫತೇಪುರ್ ಅಂತ ಚಿಕ್ಕಪಟ್ಟಣವಿದೆ. ನಾನು ಅಲ್ಲಿಯೇ ಹುಟ್ಟಿ ಬೆಳೆದೆ.

- **ವಲಸೆ ಬರಲು ಕಾರಣ?**

ಉತ್ತಮ ಜೀವನದ ಅವಕಾಶ. ಈಗ ಸೌದಿಗೆ ಜನ ಹೋಗ್ತಿದಾರಲ್ಲವಾ, ಹಾಗೆ.

- **ಪೂರ್ವಜರ ದೇಶಕ್ಕೆ ಹೋದಾಗ ಎಂಥ ಅನುಭವವಾಯಿತು?**

ಪೂರ್ವಜರ ಊರನ್ನು ನೋಡುವ ಕುತೂಹಲ ಬಹಳ ಇತ್ತು. ಹೋದೆ. ಅವರ ಮನೆಗಳೂ ಎಲ್ಲಿದ್ದವು ಎಂದು ತಿಳಿಯಲಿಲ್ಲ. ನನ್ನ ಗೈಡಿಗೆ ಊರಿನ ಅತ್ಯಂತ ಹಳೇ ವಸತಿ ಪ್ರದೇಶಕ್ಕೆ ಕರೆದೊಯ್ಯಲು ಹೇಳಿದೆ. ಅಲ್ಲಿ ಪಾಳುಮನೆಗಳಿದ್ದವು. ಎಲ್ಲವೂ ಮಣ್ಣಿನ ಮನೆಗಳು. ಮಣ್ಣಿನ ರಸ್ತೆಗಳು. ಇರಾನಿನ ಜನ ಹಳ್ಳಿಗಳಲ್ಲಿ ಮಣ್ಣಿನ ಮನೆ ಕಟ್ಟುತ್ತಾರೆ. ಅದರಲ್ಲಿ ಸುಂದರವಾದ ಮಿನಾರು ನಿರ್ಮಿಸುತ್ತಾರೆ. ಮನೆಗೆ ದೂರದಿಂದಲೇ ಯಾರಾದರೂ ಬರುವುದು ಕಾಣುವಂತೆ ಜಾಲಂದ್ರಗಳಿರುತ್ತವೆ. ಪೂರ್ವಜರ ಮನೆಗಳನ್ನು ನೋಡಲು ಹಿಂದೂಸ್ತಾನದಿಂದ ಒಬ್ಬ ವ್ಯಕ್ತಿ ಬಂದಿದ್ದಾನೆಂಬ ವಿಷಯ ಜನರಿಗೆ ಗೊತ್ತಾಯಿತು. ಅವರು ತಮ್ಮೊಳಗೆ ಗುಸುಗುಸು ಮಾತಾಡಿಕೊಳ್ಳುತ್ತಿದ್ದರು. ನನ್ನ ಮಾರ್ಗದರ್ಶಿ, "ನಿಮ್ಮ ಬಗ್ಗೆ ಜನ ಏನು ಮಾತಾಡಿಕೊಳ್ಳುತ್ತಿದ್ದಾರೆ ಎಂದು ತಿಳಿದಿದೆಯೇ?" ಎಂದು ಕೇಳಿದ. ನನಗೆ ಫಾರಸಿ ಬರುವುದಿಲ್ಲವಾಗಿ ಏನೆಂದು ಕೇಳಿದೆ: "ಈತ ಖಂಡಿತವಾಗಿ ಪೂರ್ವಜರು ಅಡಗಿಸಿಟ್ಟ ಸಂಪತ್ತನ್ನು ಅಗೆದು ತೆಗೆಯಲು ಬಂದಿದ್ದಾನೆ. ಇಲ್ಲದಿದ್ದರೆ ಬಿದ್ದುಹೋದ ಕಚ್ಚಾಮನೆಗಳನ್ನು ನೋಡಲು ಐನೂರು ವರ್ಷಗಳ ಬಳಿಕ ಯಾರು ಬರುತ್ತಾರೆ ಎಂದು ಆಡಿಕೊಳ್ಳುತ್ತಿದ್ದಾರೆ" ಎಂದು ಆತ ಹೇಳಿದ.

- **ಭಾರತದ ಕವಿಗಳು ಫಾರಸಿಯಲ್ಲಿ ಕಾವ್ಯ ರಚಿಸಿದರು. ಇದನ್ನು ಇರಾನಿನ ಲೇಖಕರು ಹೇಗೆ ಪರಿಗಣಿಸುತ್ತಾರೆ?**

ಇರಾನಿನ ಫಾರಸಿ ಸಾಹಿತ್ಯ ಲೋಕವು ಭಾರತ ಪಾಕಿಸ್ತಾನದ ಫಾರಸಿ ಕವಿಗಳನ್ನು ಅಷ್ಟಾಗಿ ಮಾನ್ಯ ಮಾಡುವುದಿಲ್ಲ. ಅವರು ಮಾನ್ಯತೆ ಕೊಡುವ ಒಬ್ಬನೇ ಒಬ್ಬ ಕವಿಯೆಂದರೆ ಚಂದ್ರಭಾನ್ ಬ್ರಾಹ್ಮನ್. 17ನೇ ಶತಮಾನದವನು. ಲಾಹೋರಿನಲ್ಲಿದ್ದ. ಮೊಗಲರ ಕಾಲದಲ್ಲಿ ನಿರ್ಮಾಣವಾದ ಇಂಡೋ–ಪರ್ಶಿಯನ್ ಸಂಸ್ಕೃತಿಯಲ್ಲಿ ರೂಪುಗೊಂಡ ಈತ ಸೂಫಿ ತತ್ತ್ವಜ್ಞಾನದಿಂದ ಪ್ರಭಾವಿತನಾದವನು. ಚಕ್ರವರ್ತಿ ಶಹಾಜಹಾನನು ಈತನಿಗೆ 'ರಾಯ್' ಬಿರುದು ಕೊಟ್ಟನು. ತನ್ನ ಆಸ್ಥಾನದಲ್ಲಿ ವಿಶೇಷ ಕಾರ್ಯದರ್ಶಿ ಹುದ್ದೆ ನೀಡಿ ಗೌರವಿಸಿದನು. ಚಂದ್ರಭಾನ್ ದಾರಾಶುಕೊನ ಫಾರಸಿ–ಅರಬಿ ಅನುವಾದ ಯೋಜನೆಯಲ್ಲೂ ಕೆಲಸ ಮಾಡಿದನು. ಆತನ ಒಂದು ದ್ವಿಪದಿ ಪ್ರಸಿದ್ಧವಾಗಿದೆ:

**ಬೇಬಿನ್ ಕರಾಮತೆ ಬುತಖಾನಾ ಎ ಮರಾ ಎ ಶೇಕ್ /**
**ಕೆ ಚೂಂ ಖರಾಬ್ ಶುವದ ಖಾನ್ ಎ ಖುದಾ ಗರ್ದದ್ /**

ಏ ಶೇಕ್, ಮಂದಿರಗಳ ಮಹಿಮೆ ನೋಡು, ಇವು ಮಂದಿರವಾಗಿದ್ದಾಗಲೂ ಪವಿತ್ರವಾಗಿದ್ದವು; ಭಗ್ನವಾದಾಗ ಇನ್ನೊಂದು ಪ್ರಾರ್ಥನಾ ಮಂದಿರವಾಗಿ ರೂಪಾಂತರಗೊಂಡರೂ ಪವಿತ್ರವಾದವು. ಇದನ್ನು ಅವನು ಕಾಬಾ ಕುರಿತು ಹೇಳುತ್ತಿರಬಹುದು. ಮೆಕ್ಕಾದ ಕಾಬಾ ಮೊದಲು ಅರಬ್ಬರು ವಿಗ್ರಹಗಳನ್ನಿಡುವ ಮಂದಿರವಾಗಿತ್ತಷ್ಟೆ. ಅದುವೇ ನಂತರ ಮುಸ್ಲಿಮರಿಗೆ ಪವಿತ್ರವಾದ ಸ್ಥಳವಾಯಿತು.

- **ಪಾಕಿಸ್ತಾನದ ಪ್ರವಾಸ ಕಥನ ಬರೆದಿರುವುದರಿಂದ ಕೇಳುತ್ತಿರುವೆ. ಪಾಕಿಸ್ತಾನದ ಆಳುವವರ್ಗ ಮಿಲಿಟರಿ ಭಾರತವನ್ನು ಹೇಗೆ ನೋಡುತ್ತದೆ ಎಂದು ನಮಗೆ ಗೊತ್ತಿದೆ. ಅಲ್ಲಿನ ಸಾಮಾನ್ಯ ಜನರ ದೃಷ್ಟಿಕೋನ ಅಷ್ಟಾಗಿ ತಿಳಿದಿಲ್ಲ.**